ಸುದ್ದಿ ಸ್ಫೋಟವಾಗಿತ್ತು!! ವಿರೋಧ ಪಕ್ಷದವರು ಸರ್ಕಾರದ ಮೇಲೆ ಮುಗಿಬಿದ್ದಿದ್ದರು. ಮಂತ್ರಿ ಮತ್ತು ಅಧಿಕಾರಿಗಳ ರಾಜೀನಾಮೆಗೆ ಒತ್ತಾಯಿಸುತ್ತಿದ್ದರು. ಸರ್ಕಾರ ಆ ಘಟನೆಗೂ, ಮಂತ್ರಿಗೂ, ಅಧಿಕಾರಿಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಕೈಕೊಡವಿಕೊಳ್ಳಲು ಪ್ರಯತ್ನಿಸುತ್ತಿತ್ತು. ಇಂದಿನ ಅಸೆಂಬ್ಲಿಯ ಸೆಷನ್ ಮಹತ್ವದ್ದು ಎಂದು ಟೀವಿ ನಿರೂಪಕ ಹೇಳುತ್ತಿದ್ದ.

ರೋಹಿತ್ ಚಿಂತಾಕ್ರಾಂತನಾದ. ಈಗಿನ ಪರಿಸ್ಥಿತಿಯಲ್ಲಿ ತಾನು ಬಂದ ಕೆಲಸ ಆಗುವುದು ಕಷ್ಟವೆನಿಸಿತು. ನೋಡೋಣ ಹಣೆಬರಹ ಹೇಗಿದೆಯೋ? ಟೀವಿಯಲ್ಲಿ ಪೊಲೀಸ್ ಅಧಿಕಾರಿಯ ಆತ್ಮಹತ್ಯೆಯದೇ ಸುದ್ದಿ. ಯಾವ ಚಾನಲ್ ತಿರುಗಿಸಿದರೂ ಅದೇ ಸುದ್ದಿ. ಆಡಳಿತ ಪಕ್ಷ ಮುಜುಗರಕ್ಕೆ ಸಿಕ್ಕಿತ್ತು. ತಮ್ಮ ಮಂತ್ರಿ ಮತ್ತು ಅಧಿಕಾರಿಗಳನ್ನು ಉಳಿಸಿಕೊಳ್ಳುವ ಚಿಂತೆ ಅವರಿಗಾದರೆ ವಿರೋಧ ಪಕ್ಷದವರಿಗೆ ಆಡಳಿತ ಪಕ್ಷವನ್ನು ಮಣಿಸುವ ಯೋಚನೆ, ಯೋಜನೆ!

ಸ್ನಾನ ಮುಗಿಸಿ, ಸಿದ್ಧನಾಗಿ ಲಿಫ್ಟ್ ಬಳಿ ಬಂದಾಗ ರೂಮಿಗೆ ಕಾಫಿ ತಂದಿಟ್ಟಿದ್ದ ಪರಿಚಾರಕ 'ಗುಡ್ ಮಾರ್ನಿಂಗ್' ಹೇಳಿದ. ಅವನ ಬಳಿ ಮಾತಾಡಬೇಕೆನ್ನುವಾಗ ಮೊಬೈಲು ರಿಂಗಾಯಿತು. ಜಯನಗರದ ಸ್ನೇಹಿತ ಮಾತಾಡಿದ. ಸಂಜೆ ಮನೆಗೆ ಬಾ ಎಂದು ಆಹ್ವಾನ ನೀಡಿದ. ಇಬ್ಬರೂ ಟೀವಿಯಲ್ಲಿನ ನ್ಯೂಸ್ ಬಗ್ಗೆ ಮಾತಾಡಿದರು. ತನ್ನ ಕೆಲಸವಾಗುವುದರ ಬಗೆಗೆ ರೋಹಿತ್ ಅನುಮಾನ ವ್ಯಕ್ತಪಡಿಸಿದ. ಸ್ನೇಹಿತ ಸಾಂತ್ವನ ಹೇಳಿದ.

ಕೆಳಗೆ ಬಂದಾಗ ಸ್ನೇಹಿತನ ಮಾತು ನಿಂತಿತ್ತು. ರಿಸೆಪ್ಷನ್ ಬಳಿ ಕೀ ಕೊಟ್ಟಾಗ ಕೌಂಟರಿನಲ್ಲಿದ್ದ ಕೆಲಸಗಾರ ರೂಮ್ ನಂಬರು ನೋಡಿ ಮುಗುಳ್ನಕ್ಕು 'ರಾತ್ರಿ ಚೆನ್ನಾಗಿ ನಿದ್ರೆ ಬಂತಾ ಸಾರ್?' ಎಂದ. 'ಹೂ' ಎಂದಷ್ಟೇ ಹೇಳಿ ಹೋಟೆಲಿಂದೀಚೆ ಬಂದ ರೋಹಿತ್. ಅವನ ಮನಸ್ಸಿನ ತುಂಬಾ ತನ್ನ ವರ್ಗಾವಣೆಯ ವಿಷಯ ಮತ್ತು ಸರ್ಕಾರಕ್ಕೆ ಎದುರಾಗಿರುವ ಅತಂತ್ರ ಸ್ಥಿತಿ ತುಂಬಿತ್ತು. ಅನ್ಯಮನಸ್ಕನಾಗಿ ಹೋಟೆಲೊಂದರಲ್ಲಿ ಉಪಹಾರ ಮುಗಿಸಿ ವಿಧಾನಸೌಧಕ್ಕೆ ಆಟೊ ಹಿಡಿದ.

ಶಾಸಕರ ಭವನ ಖಾಲಿಯಾಗಿತ್ತು! ಶಾಸಕರ ತುರ್ತು ಮೀಟಿಂಗಿನಲ್ಲಿ ಭಾಗವಹಿಸಲು ಆಡಳಿತ ಪಕ್ಷದವರೂ, ವಿರೋಧ ಪಕ್ಷದ ಶಾಸಕರೂ ಹೋಗಿದ್ದರು! ರೋಹಿತ್ ಪೆಚ್ಚಾದ. ಎಲ್ಲಾ ಎಡವಟ್ಟಾಯಿತು ಎಂದುಕೊಂಡ. ಮತ್ತೇನು ಮಾಡಲಿ ಎಂದು ವಿಧಾನಸೌಧದ ಕಡೆ ನಡೆದ. ಒಳಗೆ ಹೋಗಲು ಪ್ರವೇಶ ಅಂದು ಯಾರಿಗೂ ಇಲ್ಲ ಎಂದು ತಿಳಿಯಿತು. ಪುಢಾರಿಗೆ ಫೋನಾಯಿಸಿದ. 'ಸ್ವಿಚ್ಡ್ ಆಫ್' ಎಂಬ ಸಂದೇಶ! ರೋಹಿತ್ ಹತಾಶನಾದ. ದಾವಣಗೆರೆಯಲ್ಲಿ ಅಪ್ಪನ ಆರೋಗ್ಯ ತೀವ್ರವಾಗಿ ಕುಸಿದಿತ್ತು. ಒಂದು ಕಿಡ್ನಿ ಹಾಳಾಗಿತ್ತು. ಮೂರು ದಿನಕ್ಕೊಮ್ಮೆ ಡಯಾಲಿಸಿಸ್ ಮಾಡಬೇಕಿತ್ತು. ಅಮ್ಮ ಕಂಗಾಲಾಗಿ ಪ್ರತಿದಿನ ಫೋನು ಮಾಡುತ್ತಿದ್ದಳು. ರೋಹಿತ್ ಅಲ್ಲಿರಬೇಕಾಗಿದ್ದುದು ಅನಿವಾರ್ಯವಾಗಿತ್ತು. ಈಗಾಗಲೇ ರಜಾ ಎಲ್ಲ ಮುಗಿಸಿ, ಲಾಸ್ ಆಫ್ ಪೇ ಕೂಡ ಮಾಡಿಕೊಂಡಿದ್ದ. ಸರ್ಕಾರಿ ಕೆಲಸ ಬಿಡುವಂತಿರಲಿಲ್ಲ. ಹೇಗಾದರೂ ವರ್ಗಾವಣೆ ಆಗಿಯೇ ತೀರುತ್ತದೆ ಎಂಬ ಆಶಾಭಾವನೆಯಿಂದಿದ್ದ ರೋಹಿತ್. ಪರಿಸ್ಥಿತಿ ತೀರಾ ಕಗ್ಗಂಟಾಗಿತ್ತು. ಇನ್ನೂ ಕೆಲವು ದಿನ ಬೆಂಗಳೂರಿನಲ್ಲಿ ಉಳಿಯಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಬೀದರಿನಲ್ಲಿ ಮಡದಿ, ದಾವಣಗೆರೆಯಲ್ಲಿ ಅಪ್ಪಅಮ್ಮ! ಅವರೆಲ್ಲಾ ತನಗಾಗಿ ಕಾಯುತ್ತಿರುತ್ತಾರೆನ್ನುವುದು ಇನ್ನೂ ಹೆಚ್ಚಿನ ಒತ್ತಡ ಸೃಷ್ಟಿಸಿತ್ತು. ಛೇ... ಒಬ್ಬನೇ ಮಗನಾಗಿ ಮಾತ್ರ ಹುಟ್ಟಬಾರದು ಎನ್ನಿಸಿತು.

ಮಾಡಲು ಇನ್ನೇನೂ ಕೆಲಸವಿರಲಿಲ್ಲ. ಸ್ನೇಹಿತ ಮನೆಗೆ ಬರಲು ಹೇಳಿದ್ದು ಸಂಜೆಗೆ.